

ಜಲಪಾತಗಳನ್ನು ಎಣಿಸಿಯೇ ಸುಸ್ತಾಗಿ ಬಿಡುತ್ತೀರಿ. ಮತ್ತೊಂದು ಸೋಜಿಗವೆಂದರೆ ಅಂಬೋಲಿಯ ದೊಡ್ಡ ಕಣಿವೆಯ ಒಂದು ಮೂಲೆಯಲ್ಲಿ ನಿಂತರೆ ಒಟ್ಟಿಗೇ ಹತ್ತಾರು ಜಲಪಾತಗಳನ್ನು ಒಟ್ಟಿಗೇ ನೋಡಬಹುದು. ಇಲ್ಲಿಯ ಗಾಳಿಯ ರಭಸ ಎಷ್ಟಿರುತ್ತದೆ ಎಂದರೆ ಒಂದು ಜಲಪಾತವಂತೂ ಕಣಿವೆಯ ಆಳದ ಪ್ರಪಾತಕ್ಕೆ ಬೀಳಲಾಗದೆ ಒದ್ದಾಡಿ ಹಿಮ್ಮುಖವಾಗಿ ಚಲಿಸಿ ಆಗಸದೆಡೆಗೆ ನುಗ್ಗುತ್ತದೆ. ಈ ನೀರನ್ನು ಬೇಕಾಬಿಟ್ಟಿಯಾಗಿ ಅಂಡಲೆಯುವ ಗಾಳಿ ಎತ್ತಿ ಒಯ್ದು ಎಲ್ಲಾ ಕಡೆಗೂ ಚೆಲ್ಲಿ ಇಡೀ ಅಂಬೋಲಿಯನ್ನು ಪ್ರಿಡ್ಜಿನಂತೆ ರೂಪಿಸಿದೆ. ಮಳೆಗಾಲದಲ್ಲಿ ಇಲ್ಲಿನ ನೀರಿನ ಸಂಭ್ರಮವನ್ನು ನೋಡಲು ಪ್ರವಾಸಿಗರೇ ಹೆಚ್ಚು. ನಮ್ಮಂತೆ ಕಪ್ಪೆ, ಹಾವು, ಚೇಳು, ಜೇಡ, ಹಾವುರಾಣಿ ಎಂದು ಬರುವ ಪ್ರಕಾಂಡ ಹುಚ್ಚರ ಸಂಖ್ಯೆ ತೀರಾ ಕಡಿಮೆ.

ಆರುನೂರ ತೊಂಬತ್ತು ಮೀಟರ್ ಎತ್ತರದಲ್ಲಿರುವ ಅಂಬೋಲಿ ಗೋವಾದ ಕರಾವಳಿ ದಾಟಿಕೊಂಡು ನುಗ್ಗಿರುವ ಪಶ್ಚಿಮ ಘಟ್ಟದ ಎತ್ತರದ ಬೆಟ್ಟಗಳನ್ನು ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿ ಹಿಡಿದಿದೆ. ಪ್ರಪಂಚದ ಪರಿಸರ ಹಾಟ್-ಸ್ಪಾಟ್‌ಗಳಲ್ಲಿ ಇದೂ ಒಂದೆಂದು ಖ್ಯಾತಿ ಗಳಿಸಿದೆ. ಅಸಾಮಾನ್ಯ ಸಸ್ಯ ಪ್ರಬೇಧ, ವಿಶಿಷ್ಟ ಪ್ರಾಣಿ-ಪಕ್ಷಿ, ಸರೀಸೃಪಗಳ ತವರೂರಿದು. ಮುಖವನ್ನು ಬಲೂನಿನಂತೆ ಊದಿಸಿಕೊಂಡು ಪ್ರಣಯಗೀತೆ ಹಾಡುವ 'ಅಂಬೋಲಿ ಕಪ್ಪೆ' ಇಲ್ಲಿಯ ಪ್ರಮುಖ ಆಕರ್ಷಣೆ. ಮ್ಯಾಕ್ರೋ ಫೋಟೊಗ್ರಫಿ ಮಾಡುವ ಹಂಬಲದ ಜನ ರಾತ್ರಿಯಾದ ಕೂಡಲೇ ಇಲ್ಲಿ ಸಕ್ರಿಯರಾಗುತ್ತಾರೆ. ಬಣ್ಣಬಣ್ಣದ ಮಲಬಾರ್ ಪಿಟ್ ವೈಪರ್ ಹಾವುಗಳು ಕೈ ಬೀಸಿ ಕರೆಯುವ ಜಾಗ ಹುಡುಕುತ್ತಾ ಹೊರಡುತ್ತಾರೆ. ತಲೆಗೆ ಟಾರ್ಚ್ ಬಿಗಿದುಕೊಂಡು ರಾತ್ರಿ ಕಗ್ಗತ್ತಲಲ್ಲಿ ಖೂನಿಯನ್ನು ಹುಡುಕುವ ಸಿಐಡಿಗಳಂತೆ; ಶಿಕಾರಿಗೆ ಹೊರಟ ಬೇಟೆಗಾರರಂತೆ, ಕಾರ್ಯಾಚರಣೆಗೆ ಇಳಿದ ಸೈನಿಕರಂತೆ, ತಪ್ಪಿಸಿಕೊಳ್ಳುವ ಕಾಡುಗಳ್ಳರಂತೆ ನಾವು ಸಾಮಾನ್ಯ ಜನರಿಗೆ ಕಂಡರೆ ಅಚ್ಚರಿ ಎನಿಸದು.

ರಾತ್ರಿ ಸ್ಥಳೀಯ ಗೈಡ್ ಕಾಕಬೀಸೆ ಎಂಬಾತನ ಹಿಡಿದುಕೊಂಡು ಕಾಡು ಸುತ್ತಲು ಹೊರಟೆವು. ಆತ ಅಲ್ಲಿನ ಪ್ರಸಿದ್ಧ ಹಾವುತೋರುಗ. ಮಳೆಗಾಲದ ಸೀಜನ್ನಿನಲ್ಲಿ ಅವನಿಗೆ ಇನ್ನಿಲ್ಲದ ಡಿಮ್ಯಾಂಡು. ತಿಂಗಳ ಮೊದಲೇ ಅವನ ಅಪಾಯಿಂಟ್ಮೆಂಟ್ ಹಿಡಿದಿಡಬೇಕು. ನಾನು ಸಿಕ್ಕಿದ್ದೇ ನಿಮ್ಮ ಪುಣ್ಯ, ನನ್ನ ಗೈಡ್ ಶಿಪ್ ಸಿಗಲು ಅದೃಷ್ಟ ಮಾಡಿರಬೇಕು ಎಂದು ದೊಡ್ಡ ಶಂಖ ತೆಗೆದು ಊದಿದ. ತನ್ನ ಪ್ರತಾಪಗಳ ಬಣ್ಣಿಸಿದ. ತನ್ನ ಸಾಧನೆಯ